

ಭರಚುಕ್ಕಿ

# ಕಾವೇರಿ ಮಡಿಲಲ್ಲಿ

ಮಳೆಗಾಲದಲ್ಲಿ ಬಲಮುರಿಯಲ್ಲಿ ಜನಜಾತ್ರೆಯೇ ನೆರೆಯುತ್ತದೆ. 300 ಅಡಿ ಎತ್ತರದಿಂದ ಧುಮ್ಮಿಕ್ಕುವ ಗಗನಚುಕ್ಕಿಯಂತೂ ಪ್ರವಾಸಿಗರ ಅಚ್ಚುಮೆಚ್ಚಿನ ತಾಣ.

■ ಬಸವರಾಜ ಹವಾಲ್ದಾರ್

ಕಾವೇರಿ ನದಿ ಮಂಡ್ಯ ಜಿಲ್ಲೆಯ ರೈತರ ಜೀವನಾಡಿ. ಬೆಂಗಳೂರು, ಮೈಸೂರು ಸೇರಿದಂತೆ ಹಲವು ನಗರ ನಿವಾಸಿಗಳ ದಾಹವನ್ನೂ ತಣಿಸುತ್ತದೆ. ಜತೆಗೆ ಹಲವು ನಿಸರ್ಗಮಯ, ರಮ್ಯ ಪ್ರವಾಸಿ ತಾಣಗಳ ಸೃಷ್ಟಿಸಿರುವ ಬೀಡೂ ಹೌದು.

ಕೆಆರ್‌ಎಸ್ ಅಣೆಕಟ್ಟು, ಬೃಂದಾವನ ಉದ್ಯಾನ, ಬಲಮುರಿ, ಸಂಗಮ, ಗಗನಚುಕ್ಕಿ, ಭರಚುಕ್ಕಿ, ಮುತ್ತತ್ತಿ ಸೇರಿದಂತೆ ಹಲವು ಪ್ರವಾಸಿ ತಾಣಗಳು ನೋಡುಗರ ಕಣ್ಮನ ಸೆಳೆಯುತ್ತವೆ.

ಕಾವೇರಿ ನದಿಗೆ ಒಡ್ಡು ಕಟ್ಟಿದ್ದರಿಂದ ಸೃಷ್ಟಿಯಾಗಿರುವ ಬಲಮುರಿ ಪ್ರವಾಸಿ ತಾಣ ಚಿಕ್ಕದೇವರಾಜ ಒಡೆಯರ್ ಕಾಲದಲ್ಲಿ ನಿರ್ಮಾಣವಾಗಿದೆ. ಕಾವೇರಿ ನದಿಯು ಬಲಕ್ಕೆ ಹಾಗೂ ಎಡಕ್ಕೆ ಎರಡು ಭಾಗವಾಗಿ ಹರಿಯುತ್ತದೆ. ಬಲ ತಿರುವಿಗೆ ನಿರ್ಮಾಣ ಮಾಡಿರುವ ಒಡ್ಡೇ ಬಲಮುರಿ ಎಂದು ಪ್ರಸಿದ್ಧಿಯಾಗಿದೆ.

ವಿರಿಜಾ ನಾಲೆ ಮೂಲಕ ನೀರಾವರಿ ಕಲ್ಪಿಸಲು ಚಿಕ್ಕದೇವರಾಜ ಒಡೆಯರ್ ಅವರು 17ನೇ ಶತಮಾನದಲ್ಲಿ ಬಲಮುರಿ ಒಡ್ಡನ್ನು ನಿರ್ಮಾಣ ಮಾಡಿದ್ದರು. ಅದು ಇಂದು ಸುಂದರ, ನಿಸರ್ಗಮಯ, ರಮ್ಯ ಪ್ರವಾಸಿ ತಾಣವಾಗಿ ಮಾರ್ಪಟ್ಟಿದೆ. ಅಂದಾಜು 80 ರಿಂದ 90 ಮೀಟರ್ ಉದ್ದವಿದ್ದು, ಆರರಿಂದ ಹತ್ತು ಅಡಿಯವರೆಗೆ ಎತ್ತರವಿದೆ. ನದಿಯ ಹರಿವು ಕಡಿಮೆ ಇದ್ದಾಗ ಪ್ರವಾಸಿಗರು ಬಲಮುರಿ ಒಡ್ಡಿನ ಮೇಲೆ ಸಂಚರಿಸಿ, ಸಂಭ್ರಮಿಸುತ್ತಾರೆ. ಹಿನ್ನೀರಿನಲ್ಲಿ ಹರಿಗೋಲಿನಲ್ಲಿ ಹೋಗಬಹುದು.

ಬಲಮುರಿಯಲ್ಲಿ ಚೋಳರ ಕಾಲದ ದೇವಸ್ಥಾನಗಳಿವೆ. ಆಂಜನೇಯ, ಗಣೇಶ, ಅಗಸ್ತ್ಯೇಶ್ವರ ದೇವಸ್ಥಾನಗಳನ್ನೂ ಕಾಣಬಹುದು. ಅಗಸ್ತ್ಯ ಮುನಿಗಳು ದಕ್ಷಿಣ ಭಾರತಕ್ಕೆ ಬಂದಾಗ ಬಲಮುರಿಗೂ ಭೇಟಿ ನೀಡಿದ್ದರು ಎಂಬ ಮಾತುಗಳು ಇವೆ.

ಕೆಆರ್‌ಎಸ್ ಅಣೆಕಟ್ಟೆಯಿಂದ ನದಿಗೆ ನೀರು ಬಿಟ್ಟಾಗ ಬಲಮುರಿ ಒಡ್ಡಿನ ಮೇಲಿಂದ ಕೆಳಕ್ಕೆ ಲಾಳಾಕಾರದಲ್ಲಿ ('ಯು' ಆಕಾರ) ಧುಮ್ಮಿಕ್ಕುವ ನೀರನ್ನು ನೋಡಲು ಮನಮೋಹಕವಾಗಿರುತ್ತದೆ. ಒಡ್ಡಿನ ಮೇಲೆ ಒಂದಡಿಯಷ್ಟು ನೀರಿದ್ದಾಗ ಪ್ರವಾಸಿಗರು ಅದರ ಮೇಲೆ ಸಂಚರಿಸಿ, ಸೆಲ್ಫಿ ತೆಗೆದುಕೊಂಡು ಸಂಭ್ರಮಿಸುತ್ತಾರೆ. ನೀರಿನಲ್ಲಿ ಆಟವಾಡಲು ಅವಕಾಶ ಇದೆ.

ಮೈಸೂರಿನಿಂದ ಕೆಆರ್‌ಎಸ್‌ಗೆ ಹೋಗುವಾಗ ಬೆಳಗೊಳದ ಬಳಿ ಬಲಕ್ಕೆ ತಿರುಗಿ 2 ಕಿ.ಮೀ. ಸಾಗಿದರೆ ಬಲಮುರಿ ಸಿಗುತ್ತದೆ. ಶ್ರೀರಂಗಪಟ್ಟಣದಿಂದ ಕೆಆರ್‌ಎಸ್‌ಗೆ ಹೋಗುವಾಗಲೂ ಬೆಳಗೊಳ ಬಳಿ ತಿರುಗಿಕೊಳ್ಳಬೇಕು. ಮೈಸೂರು, ಶ್ರೀರಂಗಪಟ್ಟಣದಿಂದ 12 ಕಿ.ಮೀ, ಮಂಡ್ಯದಿಂದ 35 ಕಿ.ಮೀ. ಹಾಗೂ ಬೆಂಗಳೂರಿನಿಂದ 135 ಕಿ.ಮೀ. ದೂರ ಇದೆ.

## ಗಗನಚುಕ್ಕಿ - ಭರಚುಕ್ಕಿ

ಕಾವೇರಿ ನದಿಯೇ ಸೃಷ್ಟಿಸಿರುವ ನಯನ ಮನೋಹರ ಜಲಧಾರೆಗಳೆಂದರೆ ಗಗನಚುಕ್ಕಿ ಹಾಗೂ ಭರಚುಕ್ಕಿ. ಗಗನಚುಕ್ಕಿ ಮಂಡ್ಯ ಜಿಲ್ಲೆಯಲ್ಲಿದ್ದರೆ, ಭರಚುಕ್ಕಿಯು ಚಾಮರಾಜನಗರ ಜಿಲ್ಲೆಯಲ್ಲಿದೆ. ಆದರೆ, ಎರಡೂ ಹದಿನೈದು ಕಿ.ಮೀ. ಅಂತರದಲ್ಲಿವೆ.

ಗಗನಚುಕ್ಕಿ ಜಲಪಾತದಲ್ಲಿ 300ಕ್ಕೂ ಹೆಚ್ಚು ಅಡಿ ಎತ್ತರದಿಂದ ದುಮ್ಮಿಕ್ಕುವ ಜಲಧಾರೆಯನ್ನು ನೋಡುವುದೇ ಒಂದು ಸೊಬಗು. ಕಾವೇರಿ ನದಿ ತುಂಬಿ ಹರಿದಷ್ಟೂ ಈ ಜಲಪಾತಗಳು ಮೈದುಂಬಿಕೊಂಡು ಧುಮುಕ್ಕುತ್ತವೆ. ಹಾಲಿನ ನೊರೆಯಂತಹ ಪ್ರವಾಹವೇ ಉಕ್ಕಿ ಬಂದಂತೆ ಕಾಣುತ್ತದೆ.

ಗಗನಚುಕ್ಕಿ ಜಲಪಾತದ ಮೆಲ್ಭಾಗದಲ್ಲಿರುವ ದರ್ಗಾ ಬಳಿಯಿಂದ ನೋಡಬಹುದು. ಜಲಪಾತದದ ಎದುರಗಡೆಯಿಂದಲೂ ನೋಡಬಹುದು. ಎದುರುಗಡೆಯಲ್ಲಿಯೂ ಎರಡು ಪಾಯಿಂಟ್‌ಗಳಿವೆ. ಎದುರು ನಿರ್ಮಾಣ ಮಾಡಿರುವ ಕಟ್ಟೆಯಿಂದಲೇ ನೋಡುವುದು ಒಂದಾದರೆ, ಪಾವಟಿಗೆಗಳನ್ನು ಇಳಿದು ಹೋಗಿ ನೀರು ಧುಮುಕುವುದನ್ನು ಹತ್ತಿರದಿಂದ ವೀಕ್ಷಿಸಬಹುದು.

ಗಗನಚುಕ್ಕಿಗೆ ಮೂರು ಕಿ.ಮೀ. ದೂರದಲ್ಲಿ 1902ರಲ್ಲಿ ಕೋಲಾರ ಚಿನ್ನದ ಗಣಿಗೆ ವಿದ್ಯುತ್ ಸರಬರಾಜು ಮಾಡಲು ಸ್ಥಾಪಿಸಿರುವ ಶಿವನಸಮುದ್ರಂ (ಬ್ಲಫ್) ದಲ್ಲಿರುವ ಶೇಷಾದ್ರಿ ಅಯ್ಯರ್ ಜಲ ವಿದ್ಯುತ್ ಉತ್ಪಾದನಾ ಕೇಂದ್ರ ಸಿಗುತ್ತದೆ. ಏಷ್ಯಾದಲ್ಲಿಯೇ ಮೊದಲ ಜಲ ವಿದ್ಯುತ್ ಕೇಂದ್ರವಿದು.

ಮಳವಳ್ಳಿಯಿಂದ ಗಗನಚುಕ್ಕಿ 20 ಕಿ.ಮೀ ಹಾಗೂ ಮೈಸೂರಿನಿಂದ 70 ಕಿ.ಮೀ. ದೂರದಲ್ಲಿದೆ. ಮಳವಳ್ಳಿಯಿಂದ ಭರಚುಕ್ಕಿ 35 ಕಿ.ಮೀ. ದೂರದಲ್ಲಿದೆ. ಅನತಿ ದೂರದಲ್ಲಿಯೇ ಮಧ್ಯರಂಗ ದೇವಸ್ಥಾನವಿದೆ. ■